## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 761 (918)
ಮಾನ್ಯ ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ
ಉತ್ತರಿಸುವ ದಿನಾಂಕ : 14-03-2025
ಉತ್ತರಿಸುವ ಸಚಿವರು : ಮಾನ್ಯ ಸಮಾಜ ಕಲ್ಯಾಣ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಮಾಜ ಕಲ್ಯಾಣ ಇಲಾಖೆಯಲ್ಲಿ ನೇಮಕವಾದ ವಾರ್ಡನ್‌ಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಎಷ್ಟು ವರ್ಷಗಳಿಗೆ ಮುಂಬಡ್ತಿ ನೀಡಬೇಕೆಂಬ ನಿಯಮವಿದೆ; ಇದುವರೆಗೆ ಎಷ್ಟು ಜನ ವಾರ್ಡನ್‌ಗಳಿಗೆ ಮುಂಬಡ್ತಿ ನೀಡಲಾಗಿದೆ; (ವಿವರ ನೀಡುವುದು)</td><td>ಸಮಾಜ ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು-2022 ರನ್ವಯ ವಾರ್ಡನ್ ಹುದ್ದೆಯ ನೌಕರರುಗಳಿಗೆ ಕಛೇರಿ ಅಧೀಕ್ಷಕರು ಮತ್ತು ಸೀನಿಯರ್ ವಾರ್ಡನ್ ಹುದ್ದೆಗೆ ಮುಂಬಡ್ತಿ ಹೊಂದಲು ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಹುದ್ದೆಗಳಿಗೆ ಮುಂಬಡ್ತಿ ಹೊಂದಲು ಕನಿಷ್ಟ 05 ವರ್ಷ ಅರ್ಹತಾದಾಯಕ ಸೇವೆ ಪೂರೈಸಿರಬೇಕಾಗಿರುತ್ತದೆ.<br><br>ಸಮಾಜ ಕಲ್ಯಾಣ ಇಲಾಖೆಯಲ್ಲಿ ಕಾಲಕಾಲಕ್ಕೆ ಖಾಲಿ ಹುದ್ದೆಗಳ ಲಭ್ಯತೆ ಅನುಸಾರ ಅರ್ಹತೆ, ಮೀಸಲಾತಿ ಹಾಗೂ ಪೋಷಕ ವೃಂದಗಳಿಗೆ ನಿಗದಿಪಡಿಸಿರುವ ಅನುಪಾತದನ್ವಯ ಅರ್ಹ 179 ನೌಕರರಿಗೆ ವಾರ್ಡನ್ ಹುದ್ದೆಯಿಂದ ಕಛೇರಿ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡಲಾಗಿರುತ್ತದೆ ಹಾಗೂ ಅರ್ಹ 46 ನೌಕರರಿಗೆ ವಾರ್ಡನ್ ಹುದ್ದೆಯಿಂದ ಸೀನಿಯರ್ ವಾರ್ಡನ್ ಹುದ್ದೆಗೆ ಮುಂಬಡ್ತಿ ನೀಡಲಾಗಿರುತ್ತದೆ.</td></tr>
<tr><td>ಆ)</td><td>ಈ ಇಲಾಖೆಯಲ್ಲಿ ಯಾವ ಯಾವ ವರ್ಷದಲ್ಲಿ ನೇರ ನೇಮಕಾತಿ ಮಾಡಿಕೊಳ್ಳಲಾಗಿದೆ; ನೇರ ನೇಮಕಾತಿ ಆದವರ ಸಂಖ್ಯೆ ಎಷ್ಟು; ಪ್ರತಿ ಐದು ವರ್ಷಕ್ಕೊಮ್ಮೆ ಮುಂಬಡ್ತಿ ನೀಡಬೇಕೆಂಬ ನಿಯಮವಿದ್ದು ಅದರಂತೆ ಎಷ್ಟು ಜನರಿಗೆ ಮುಂಬಡ್ತಿ ನೀಡಲಾಗಿದೆ? (ವಿವರ ನೀಡುವುದು)</td><td>ಸಮಾಜ ಕಲ್ಯಾಣ ಇಲಾಖೆಯಲ್ಲಿ ನೇರ ನೇಮಕಾತಿಯಡಿ ಆಯ್ಕೆಗೊಂಡಿರುವ ಅಭ್ಯರ್ಥಿಗಳ ಸಂಖ್ಯೆಯ ವಿವರ ಈ ಕೆಳಕಂಡಂತಿದೆ.<br><table>
<tr><th>ಕ್ರ.ಸಂ.</th><th>ವರ್ಷ</th><th>ನೇರ ನೇಮಕಾತಿಯದವರ ಸಂಖ್ಯೆ</th></tr>
<tr><td>1</td><td>2002</td><td>569</td></tr>
<tr><td>2</td><td>2010</td><td>228</td></tr>
<tr><td>3</td><td>2011</td><td>257</td></tr>
<tr><td>4</td><td>2019</td><td>238</td></tr>
<tr><td>5</td><td>2021</td><td>31</td></tr>
<tr><td>6</td><td>2023</td><td>107</td></tr>
</table><br>ಈವರೆವಿಗೂ 225 ವಾರ್ಡನ್‌ಗಳಿಗೆ ಅರ್ಹತೆಯನ್ನಾಧರಿಸಿ ಮುಂಬಡ್ತಿ ನೀಡಲಾಗಿರುತ್ತದೆ.</td></tr>
</table>

**ಸಕಇ 233 ಪಕವಿ 2025**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**